# ದ್ವಿತೀಯ ಬಿ.ಎ / ಬಿ.ಎಸ್ಸಿ., ಪದವಿ ಪರೀಕ್ಷೆ

## ಆಗಸ್ಟ್ / ಸೆಪ್ಟಂಬರ್ 2011

## ಅಂಚೆ ಮತ್ತು ತೆರಪಿನ ಶಿಕ್ಷಣ

### ಕನ್ನಡ ಭಾಷಾ ಪತ್ರಿಕೆ – ೨

( ಪಠ್ಯಗಳು: ಪ್ರಾಚೀನ ಕನ್ನಡ ಕಾವ್ಯ – ೨, ತುಘಲಕ್, ಆಯ್ದ ಸಣ್ಣ ಕಥೆಗಳು, ದೇವರು)

*ಸಮಯ: 3 ಗಂಟೆಗಳು]* *[ಅಂಕಗಳು : 70 /80*

**1.** ಅ) ಒಂದರ ಭಾವ ಸ್ವಾರಸ್ಯವನ್ನು ಸಂದರ್ಭದೊಡನೆ ವಿವರಿಸಿ. 1 x 4 = 04

೧) ಮರುಳು ಮಾಧವ ಮಹಿಯ ರಾಜ್ಯದ
ಸಿರಿಗೆ ಸೋಲುವನಲ್ಲ ಕೌಂತೇ
ಯರು ಸುಯೋಧನರೆನಗೆ ಬೆಸಕೈವಲ್ಲಿ ಮನವಿಲ್ಲ
ಹೊರೆದ ದಾತಾರಂಗೆ ಹಗೆವರ
ಶಿರವನರಿದೊಪ್ಪಿಸುವೆನೆಂಬೀ
ಭರದೊಳಿರ್ದೆನು ಕೌರವೇಂದ್ರನ ಕೊಂದೆ ನೀನೆಂದ ॥

೨) ಉಳಿದವರೆಲ್ಲ ನಾನೊಂದು ಗಳಿಗೆ ಕಣ್ಣು ಮುಚ್ಚಿದರೆ ಸಾಕೆಂದು
ಕುಳಿತಿದ್ದಾರೆ, ನಾನೇನು ಮಾಡಬೇಕು ಇದಕ್ಕೆಲ್ಲ?
ನೂರಾರು ಕಾಯಿಲೆಗಳ ಹುತ್ತವಾಗಿದೆ ನನ್ನ ರಾಜ್ಯ. ಒಂದು ಬೇನೆಯನ್ನು
ನಿಲ್ಲಿಸಲಿಕ್ಕೆ ಹೋದರೆ ಇನ್ನೊಂದು ಬೇನೆ ಬಲಿಯುತ್ತದೆ.

ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ. 8 x ½ = 04

ಕಳ, ಮಾತಂಗ, ಮುನ್ನೀರ್, ಮಲರ್, ಗೇಹ, ಸುರಗಿ, ಕಾಯ, ಸರವಿ, ಕಾಜಿ, ವಜೀರ, ಶಹರ, ಧರಣಿ

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ. 2 x 2 = 04

ಅನಂತ ವೀರ್ಯ, ಕೇವಲಿಗಳು, ಸುದತ್ತಾಚಾರ್ಯರು, ಶಿಹಾಬುದ್ದೀನ್.

**2.** ನಾಲ್ಕಕ್ಕೆ ಸಂದರ್ಭ ಸೂಚಿಸಿ ಟಿಪ್ಪಣಿ ಬರೆಯಿರಿ: 4 x 3 = 12

೧) ಸೂಳ್ಪಡೆಯಲಪ್ಪುದು ಕಾಣಾ ಮಹಾಜಿರಂಗದೊಳ್.
೨) ನನಗೆ ಇರುವುದು ಒಂದೇ ಜನ್ಮ, ಒಂದೇ ದೇಹ.
೩) ಪಟಿಗಂ ಪಾಪಕ್ಕಮಂಜದವರೇಗೆಯ್ಯರ್
೪) ಇತಿಹಾಸವೆಂದರೆ ಒಂದು ಟಕ್ಕಾಟಕ್ಕಿ
೫) ಪೆತ್ತ ಪರೀಷಹ ಜಯಮೆ ತಪಂ
೬) ಅನ್ನ ಇಲ್ಲದೆ ಬದುಕು ಎಂದರೆ ಕೊಲೆ ಅಲ್ಲದೆ ಇನ್ನೇನು?

**3.** (ಅ) ಒಂದು ಪ್ರಶ್ನೆಗೆ ಉತ್ತರಿಸಿ: 1 x 8 = 08

೧) ಸೀತಾಪಹರಣ ಸನ್ನಿವೇಶದಲ್ಲಿ ಬರುವ ರಾವಣನ ವ್ಯಕ್ತಿತ್ವವನ್ನು ನಿರೂಪಿಸಿ.
೨) ಮನುಷ್ಯನ ಬದುಕನ್ನು ಹಸನು ಮಾಡುವ ಹಂಬಲ ಬಸವಣ್ಣನವರ ವಚನಗಳಲ್ಲಿ ಹೇಗೆ ಮೂಡಿ ಬಂದಿದೆ?

(ಆ) ಒಂದು ಪ್ರಶ್ನೆಗೆ ಉತ್ತರಿಸಿ: 1 x 5 = 05

೧) ಕುಲದ ಬಗ್ಗೆ ಕನಕದಾಸರ ನಿಲುವುಗಳೇನು?
೨) ತವರಿನ ಅಭಿಮಾನ ಜನಪದ ಗೀತಗಳಲ್ಲಿ ಹೇಗೆ ಅಭಿವ್ಯಕ್ತಗೊಂಡಿದೆ?

*ಮುಂದುವರೆದಿದೆ. . . . . . . .2*

67

**4.** (ಅ) ಒಂದು ಪ್ರಶ್ನೆಗೆ ಉತ್ತರಿಸಿ: 1 x 8 = 08

೧) ಮಹಮ್ಮದನ ಹಿಂಸಾ ರಾಜಕಾರಣವನ್ನು ಕುರಿತು ಚರ್ಚಿಸಿ.

೨) ತುಘಲಕ್ ನಾಟಕದ ಪ್ರಮುಖ ಪಾತ್ರಗಳು ಸುಲ್ತಾನನ ವ್ಯಕ್ತಿತ್ವದ ಪ್ರತಿನಿಧಿಗಳಾಗಿ ಮೂಡಿ ಬಂದಿರುವ ಬಗೆ ಹೇಗೆ? ವಿವರಿಸಿ.

(ಆ) ಒಂದು ಪ್ರಶ್ನೆಗೆ ಉತ್ತರಿಸಿ: 1 x 5 = 05

೧) ಝಿಯಾಉದ್ದೀನ್ ಬದನಿ

೨) ಮಲತಾಯಿ.

**5.** ಒಂದು ಪ್ರಶ್ನೆಗೆ ಉತ್ತರಿಸಿ: 1 x 10 = 10

೧) ಅಜ್ಞಾತವಾಸಿ ಕಥೆಯ ನಾಗುವಿನ ತ್ಯಾಗ ಮತ್ತು ದುರಂತವನ್ನು ಚಿತ್ರಿಸಿ.

೨) ಪೋಸ್ಟಾಫೀಸಿನಿಂದಾಗಿ ಬೋಪಣ್ಣನ ಬದುಕು ಛಿದ್ರಗೊಂಡ ಬಗೆಯನ್ನು ವಿವರಿಸಿ.

**6.** ಒಂದು ಪ್ರಶ್ನೆಗೆ ಉತ್ತರಿಸಿ: 1 x 10 = 10

೧) ದೇವರು ಇದ್ದಾನೆಯೇ? ಲೇಖಕರ ಚಿಂತನೆಯ ಹಿನ್ನೆಲೆಯಲ್ಲಿ ಚರ್ಚಿಸಿ.

೨) ದೇವರನ್ನು ಕುರಿತ ಪ್ರಾಚೀನ ಕಲ್ಪನೆಗಳನ್ನು ವಿವರಿಸಿ.

**7.** ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ: **(80 ಅಂಕಗಳ ಸ್ಕೀಮ್‌ನವರಿಗಾಗಿ ಕಡ್ಡಾಯ ಪ್ರಶ್ನೆ)** 10 ಅಂಕಗಳು

೧) ದೇವರ ಸೃಷ್ಟಿಯ ಹಿಂದೆ ಇರುವ ಮನುಷ್ಯ ವ್ಯಾಪಾರದ ಮನೋಭಾವವನ್ನು ಲೇಖಕರು ಹೇಗೆ ಚಿತ್ರಿಸಿದ್ದಾರೆ?

ಅಥವಾ

೨) ದೇವರು ಕೃತಿಯಲ್ಲಿ 'ಮೌಲ್ಯಗಳೇ ದೇವರೆಂದು' ಹೇಗೆ ಪ್ರತಿಪಾದಿತವಾಗಿದೆ?

* * * * * *

68